# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 616

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11.12.2023

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಡಿತರ ಚೀಟಿಯಲ್ಲಿ ಹೆಸರು ಸೇರ್ಪಡೆ/ತಿದ್ದುಪಡಿ ಮಾಡಲು ಸಾವಿರಾರು ಅರ್ಜಿದಾರರು ಅರ್ಜಿ ಸಲ್ಲಿಸಿದ್ದು, ಚಾಲ್ತಿಯಲ್ಲಿರುವ ಪಡಿತರ ಚೀಟಿಗಳಲ್ಲಿ ಹೆಸರು ಸೇರ್ಪಡೆ/ತೆಗೆಯುವುದು, ವಿಳಾಸ ಬದಲಾವಣೆ, ಸದಸ್ಯರ ಹೆಸರು ತಿದ್ದುಪಡಿ ಸೇರಿದಂತೆ ಇನ್ನೂ ಮುಂತಾದ ತಿದ್ದುಪಡಿಗಳನ್ನು ಮಾಡುವಲ್ಲಿ ದೀರ್ಘ ಕಾಲದ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ 1.4.2023 ರಿಂದ 21.11.2023 ರವರೆಗೆ ಪಡಿತರ ಚೀಟಿ ತಿದ್ದುಪಡಿ/ಸೇರ್ಪಡೆ ಗೆ ಸ್ವೀಕೃತ ಅರ್ಜಿ ಸಂಖ್ಯೆ 47,913 ಈ ಪೈಕಿ ವಿಲೇಗೊಳಿಸಿದ ಅರ್ಜಿ ಸಂಖ್ಯೆ 37,197.<br>ಆಹಾರ ದತ್ತಾಂಶವನ್ನು ನಿರ್ವಹಿಸುತ್ತಿರುವ ಸರ್ವರ್ ಗಳಿಂದ ಮತ್ತು ಆಹಾರ ಆಪ್ಲಿಕೇಶನ್ ನಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ತಿಂಗಳು ಪಡಿತರ ಚೀಟಿಗಳ ವಿವರ ಮತ್ತು ವಿತರಣಾ ಡೇಟಾವನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲಾಗುತ್ತಿದೆ. ಇದರೊಂದಿಗೆ ಪ್ರತಿ ಮಾಹೆ ಆನ್‌ಲೈನ್ ಮುಖಾಂತರ ಪಡಿತರ ಹಂಚಿಕೆಯನ್ನು ಜನರೇಟ್ ಮಾಡಲು ಸರ್ವರ್ ಬಳಕೆಯಾಗುತ್ತಿದೆ. ತದನಂತರ ಪ್ರತಿ ಮಾಹೆಯ ಪಡಿತರ ವಿತರಣೆಯ ಪಾಸ್ (Point of Sale Machine) ಮುಖಾಂತರ ಮಾಡಲಾಗುತ್ತಿದ್ದು, ಇದಕ್ಕಾಗಿ ಸರ್ವರ್ ಬಳಕೆಯಾಗುತ್ತಿದೆ. ಈ ಕಾರಣಗಳಿಂದಾಗಿ ಸರ್ವರ್ ಮೇಲೆ ಹೆಚ್ಚಿನ ಒತ್ತಡ ಇರುತ್ತದೆ. ಆದಾಗ್ಯೂ ಪ್ರತಿ ಮಾಹೆ 1 ರಿಂದ 10 ನೇ ತಾರೀಖಿನವರೆಗೆ ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br>ಪ್ರಸ್ತುತ ಪ್ರತಿ ಮಾಹೆಯ ದಿನಾಂಕ 17 ರಿಂದ ದಿನಾಂಕ 25 ರವರೆಗೆ ಸರ್ವರ್ ಮತ್ತು AHARA ಆಪ್ಲಿಕೇಶನ್ ಅನ್ನು DBT ಅನ್ನಭಾಗ್ಯ ಯೋಜನೆಗೆ ಸಹ ಉಪಯೋಗಿಸಿಕೊಳ್ಳಲಾಗುತ್ತಿದೆ. |
| ಆ | ಬಂದಿದ್ದಲ್ಲಿ, ಸದರಿ ವಿಳಂಬಕ್ಕೆ ಹಾಗೂ ಪ್ರತಿ ದಿನ ಕೆಲವೇ ಕೆಲವು ಅರ್ಜಿಗಳನ್ನು ಮಾತ್ರ ತಿದ್ದುಪಡಿ ಮಾಡುತ್ತಿರುವುದಕ್ಕೆ ಕಾರಣಗಳೇನು; | |
| ಇ | ಸರ್ವರ್ ಸಮಸ್ಯೆ ಮತ್ತು ಇತರೆ ತಾಂತ್ರಿಕ ಕಾರಣಗಳನ್ನು ನೀಡಿ, ಪಡಿತರ ಚೀಟಿಗಳ ತಿದ್ದುಪಡಿ ಮಾಡುವಲ್ಲಿ ದೀರ್ಘ ಕಾಲದ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಸೂಕ್ತ ಕ್ರಮವಹಿಸದೇ ಇರಲು ಕಾರಣಗಳೇನು; | |
| ಈ | ಅನಗತ್ಯ ಹಾಗೂ ಕಾರಣವಿಲ್ಲದೆ ಆಗುತ್ತಿರುವ ವಿಳಂಬದಿಂದಾಗಿ ತಿದ್ದುಪಡಿಗಳಿಗೆ ಮನವಿ ಮಾಡಿರುವ ಅರ್ಜಿದಾರರು ಸಕಾಲದಲ್ಲಿ ಸರ್ಕಾರದ ಯೋಜನೆ ಮತ್ತು ಸವಲತ್ತುಗಳ ಲಾಭ ಪಡೆಯುವುದರಿಂದ ವಂಚಿತರಾಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | |

| | | |
|---|---|---|
| | | ಇದರಿಂದ ತಿಂಗಳ 20 ರಿಂದ 30 ರವರೆಗೆ ಸರ್ವರ್ ಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿರುವುದರಿಂದ ಪಡಿತರ ಚೀಟಿ ತಿದ್ದುಪಡಿಗೆ ನಿರಂತರವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡುವುದು ಕಷ್ಟ ಸಾಧ್ಯವಾಗುತ್ತಿದೆ. ಆದಾಗ್ಯೂ ಇಲಾಖೆಯಿಂದ ಕಳೆದ 6 ತಿಂಗಳಿನಿಂದ ಸ್ವೀಕೃತವಾದ 16,79,604 ಪಡಿತರ ಚೀಟಿ ತಿದ್ದುಪಡಿ ಅರ್ಜಿಗಳ ಪೈಕಿ ಈಗಾಗಲೇ 14,37,720 ಅರ್ಜಿಗಳನ್ನು ವಿಲೇಗೊಳಿಸಲಾಗಿರುತ್ತದೆ.<br>ಮುಂದುವರೆದು, ಪ್ರಸ್ತುತ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಬಳಸಲಾಗುತ್ತಿರುವ ತಂತ್ರಾಂಶದ ಸರ್ವರ್‌ಗಳು ಹಳೆಯದಾಗಿದ್ದು, ಸದರಿ ಸರ್ವರ್‌ಗಳು ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗಿರುವುದಿಲ್ಲ. ಈ ಕಾರಣದಿಂದಾಗಿ ಎಸ್.ಐ.ಸಿ ಯಿಂದ ಕೆ.ಎಸ್.ಡಿ.ಸಿ(Karnataka State Data Centre) ಗೆ ಆಹಾರ ತಂತ್ರಾಂಶದ Migration ಕಾರ್ಯವು ಪ್ರಗತಿಯಲ್ಲಿರುತ್ತದೆ. ಎಸ್. ಐ. ಸಿ ಯಿಂದ ಕೆ.ಎಸ್.ಡಿ.ಸಿ ಗೆ Migration ಕಾರ್ಯ ಪೂರ್ಣಗೊಂಡ ನಂತರ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿ ಬಗ್ಗೆ ನಿರಂತರವಾಗಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತದೆ. |

ಸಂಖ್ಯೆ: ಆನಾಸ 273 ಡಿಆರ್‌ಎ 2023

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು